ಲೇಖನ 04

# ಗ್ರೀಕ್ ದೇಶದ ಗಿಡಮೂಲಿಕೆ ತಾಯಿ ವೃತಗಳ ಅರ್ಚನೆಯ ಮಾಚಿಪತ್ರೆ

"ಹಿತ್ತಲ ಗಿಡ ಮದ್ದಲ್ಲ " ನಾಡಿನಲ್ಲಿ ಅತ್ಯಂತ ಪ್ರಚಲಿತವಿರುವ ಗಾದೆಮಾತು. ಯಾವುದು ಸುಲಭವಾಗಿ ಸಿಗುತ್ತದೆಯೋ ಅಥವಾ ನಿಕಟವಾಗಿರುತ್ತದೆಯೋ ಅದರ ಮೌಲ್ಯ ಕಡಿಮೆಯಾಗಿ ಕಾಣುತ್ತದೆ. ಅಂತೆಯೇ ಯಾವುದು ಕಷ್ಟಪಟ್ಟು ಪಡೆಯಬೇಕೋ, ದೂರವಿರುತ್ತದೆಯೋ ಅದು ಶ್ರೇಷ್ಠವೆಂದು ನಮ್ಮ ಜಾಯಮಾನ ಎಂಬುದಕ್ಕೆ ಈ ಗಾದೆಮಾತು. ನಮ್ಮ ಪರಂಪರೆಯಲ್ಲಿ ಪ್ರಾಥಮಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಹಿತ್ತಲಗಿಡದ ಮೇಲೆ ಹೆಚ್ಚಿನ ಅವಲಂಬನೆಯಿತ್ತು. ಪ್ರಕೃತಿಯ ಯಾವ ಮೂಲಿಕೆಯಲ್ಲಿ ಯಾವ ಔಷದಗುಣವಿದೆಯೆಂಬ ಅಮೂಲ್ಯ ಜ್ಞಾನವನ್ನು ಪಡೆದಿದ್ದ ಋಷಿಮುನಿಗಳು, ಸಾಧು ಸಂತರು, ಪಾರಂಪರಿಕ ವೈದ್ಯರು ನಿರಂತರವಾಗಿ ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ. ಪ್ರಕೃತಿಯು ನಮಗೆ ನೀಡಿರುವ ಅಮೂಲ್ಯ ಕೊಡುಗೆಗಳಲ್ಲಿ ಗಿಡಮೂಲಿಕೆಗಳು ಪ್ರಮುಖ ಸ್ಥಾನ ಪಡೆದಿವೆ. ಇಂತಹ ಹಲವು ಸಸ್ಯಗಳ ಸಾಲಿನಲ್ಲಿ ವಿಶಿಷ್ಠ ಸ್ಥಾನ ಪಡೆದಿರುವ ಮೂಲಿಕೆಯೇ ಮಾಚಿಪತ್ರೆ ಕೇವಲ ಅಲಂಕಾರಿಕ ಸಸ್ಯವಾಗಿರದೇ ಅನೇಕ ಆರೋಗ್ಯಕಾರಿ ಗುಣಗಳಿಂದ ಶತಮಾನಗಳಿಂದಲೂ ಜನಮನವನ್ನು ಗೆದ್ದ ಮನೆಮದ್ದಿನ ಗಿಡ. ನೋಡಲು ಸೇವಂತಿಗೆಯಂತೆ ಕಾಣುವ ಪುಟ್ಟ ಸಸ್ಯ ಆಯುರ್ವೇದಲ್ಲೂ, ಧಾರ್ಮಿಕ ಆಚರಣೆಯಲ್ಲೂ ಮಹತ್ವದ ಸ್ಥಾನ ಹೊಂದಿರುವ ಭೂಸ್ತರ ಸಸ್ಯ.



ಚಿತ್ರ ಕೃಪೆ: ಉಮಾಪತಿ ಭಟ್ಟ ಕೆ ವಿ

ವಿವಿಧ ವೃತಗಳ ಪತ್ರಪೂಜೆಯ ಪತ್ರವಾಗಿರುವ ಸಸ್ಯ ಮಲೆನಾಡಿನ ಜನರಲ್ಲಿ ಮಂಚಿಕುಡಿಯೆಂದು ಪ್ರಸಿದ್ಧಿಯಾಗಿದೆ. ಗಿಡಮೂಲಿಕೆ ತಾಯಿ ಎಂದೇ ನಂಬಿರುವ ರೋಮನ್ ಸೈನಿಕರ ಆಯಾಸ ಕಳೆಯುವ ಪುಟಾಣಿ ಔಷಧಿಯ ಸಸ್ಯ ಮಾಚಿಪತ್ರೆ.

ಯೂರೋಪ ಉತ್ತರ ಆಫ್ರಿಕಾ, ಉತ್ತರ ಅಮೇರಿಕಾ ಭಾರತಕ್ಕೆ ಸ್ಥಳಿಯವಾಗಿರುವ ಮಂಚಿಪತ್ರೆಯು ಆಸ್ಟಿರೇಸಿ ಸಸ್ಯಕಟುಂಬದಲ್ಲಿ ಜನಿಸಿದೆ. ಆರ್ಟಿಮಿಸಿಯಾ ವಲ್ಗೇನ್ಸ್ ಇದರ ವೈಜ್ಞಾನಿಕ ಹೆಸರು. ಆರ್ಟಿಮಿಸಿಯಾ ಗ್ರೀಕ್ ದೇಶದ ಕಾಡುಪ್ರಾಣಿ ಮತ್ತು ಮಹಿಳೆಯರ ಹೆರಿಗೆ ದೇವತೆ. ಅದಕೆ ಆರ್ಟಿಮಿಸಿಯಾ ಸೇರಿಕೊಂಡಿದೆ.

ಮಂಚಿಕುಡಿ, ಮಂಚಿಪತ್ರೆ ಎಂದು, ಹಿಂದಿಯಲ್ಲಿ ಮತ್ಸರೂ ಇಂಗ್ಲಿಷಿನಲ್ಲಿ ಇಂಡಿಯನ್ ಮಗ್ವರ್ಟ್, ಮರಾಠಿಯಲ್ಲಿ ಸುರಪೀಣ, ತಮಿಳಿನಲ್ಲಿ ಮಾಸಿಪಟ್ಟಿರಿ, ತೆಲುಗು ದವನಮು, ಗಂದೊತ್ತಟ, ತಪೋಧನ, ಪುಷ್ಪಚಾಮರ, ಬ್ರಹ್ಮಜಾತ, ತಪಸಪತ್ರ ಇವು ಸಂಸ್ಕೃತದ ನಾಮಾವಳಿಗಳು. ಯಾವ ಸಸ್ಯವು ಮನುಷ್ಯರ ಆರೋಗ್ಯಕ್ಕೆ ತುಂಬಾ ಉಪಯುಕ್ತವೋ, ಯಾವ ಸಸ್ಯ ನಿತ್ಯದ ಆಹಾರ ತಯಾರಿಕೆಗೆ ಯೋಗ್ಯವೋ ಅವೆಲ್ಲ ಸಸ್ಯಗಳನ್ನು ಧಾರ್ಮಿಕ ಆಚರಣೆಯಲ್ಲಿ ಬಳಕೆ ಮಾಡುವ ವಿಧಾನ ವನ್ನು ನಮ್ಮ ಪೂರ್ವಜರು ನಮಗೆ ತೋರಿಸಿಕೊಟ್ಟಿದ್ದಾರೆ. ಅದರಂತೆಯೇ ಮಾಚಿಪತ್ರೆ ಕೂಡಾ ದುರ್ಗಾ ಪೂಜಾ, ಸತ್ಯನಾರಾಯಣ ವ್ರತ, ಭೀಮನ ಅಮವಾಸ್ಯೆ ಸಿದ್ದಿ ವಿನಾಯಕ ವ್ರತ, ಶಿವಪೂಜಾ, ಅನಂತಚತುರ್ದಶಿ, ನಿರಶನಾರ್ಕವಾರವ್ರತ, ಶನಿ ಪ್ರದೋಷ ವ್ರತ, ಉಮಾಮಹೇಶ್ವರ ವ್ರತ, ಅನಂತ ಪದ್ಮನಾಭ ವ್ರತ, ಸ್ವರ್ಣಗೌರಿವ್ರತ, ವರಮಹಾಲಕ್ಷ್ಮೀ ವೃತ, ಸಂಕಷ್ಟ ಚತುರ್ಥಿ, ಕೇದಾರೇಶ್ವರ ವ್ರತ ಕಲ್ಪ, ವರದಶಂಕರ ವ್ರತ, ಸೋಮವತಿ ವ್ರತಗಳಲ್ಲಿ ಮಾಚಿಪತ್ರ ದಿಂದ ಅರ್ಚನೆ ಮಾಡುವ ಕ್ರಮವಿದೆ. ಗ್ರೀಕ್ ಪುರಾಣದಲ್ಲಿ ಆರ್ಟೆಮಿಸಿಯಾ ಎಂಬುದು ಅಲ್ಲಿನ ಕಾಡಿನ ಪ್ರಾಣಿಗಳ ಮತ್ತು ಹೆರಿಗೆಯ ದೇವತೆಯಾಗಿದೆ. ಈ ಸಸ್ಯವು ಮಹಿಳಾ ಸಂಬಂಧಿತ ಕಾಯಿಲೆಗಳನ್ನು ವಾಸಿ ಮಾಡುವುದರಿಂದ ಆರ್ಟೆಮಿಸಿಯಾ ದೇವಾಲಯದಲ್ಲಿ ಅವಳನ್ನು ಗೌರವಿಸಲು ಮತ್ತು ವಿವಿಧ ಆಚರಣೆಗಳಲ್ಲಿ ಮಾಚಿಪತ್ರೆಯನ್ನು ಬಳಕೆ ಮಾಡುತ್ತಾರೆ. ಮಕ್ಕಳ ರಕ್ಷಣೆಗೆ ತಾಯಿತವಾಗಿಯೂ ಉಪಯೋಗಿಸುತ್ತಾರೆ.ಒಳ್ಳೆಯ ಕನಸು ಬೀಳಲಿ ಎಂಬ ಕಾರಣಕ್ಕಾಗಿ ಒಣಗಿದ ಮಂಚಿಕುಡಿಯನ್ನು ಹಾಸಿಗೆಯ ದಿಂಬಿನ ಕೆಳಗೆ ಇಡುವದು ಮತ್ತು ಹೊಗೆಯನ್ನು ಸೇವನೆ ಮಾಡಲು ಬಳಸಲಾಗುತ್ತದೆ. ವಿಶೇಷವಾಗಿ ಸ್ತ್ರೀಯರ ಕಾಯಿಲೆಗಳ ಚಿಕಿತ್ಸೆಗೆ ಪವಿತ್ರ ಗಿಡಮೂಲಿಕೆಯಾಗಿರುವದರಿಂದ ಗಿಡಮೂಲಿಕೆಗಳ ತಾಯಿ" ಪರಿಗಣಿಸಿಲಾಗಿದೆ.

ಪ್ರಾಚೀನ ಕಾಲದಲ್ಲಿ ಆಯಾಸವನ್ನು ತಡೆಗಟ್ಟಲು ಮತ್ತು ವಿಷಕಾರಿ ಜೀವಿಗಳಿಂದ ಪ್ರಯಾಣಿಕರನ್ನು ರಕ್ಷಿಸಲು ಮಂಚಿಕುಡಿಯ ಚಿಗುರನ್ನು ಬೂಟಿನಲ್ಲಿ ಇಡಲಾಗುತ್ತಿತ್ತು. ಮಿಯಾನ ದ್ವೀಪದ ಸಾಂಕೇತಿಕ ಸಸ್ಯವಿದು. ಕಿರೀಟರೂಪದಲ್ಲಿ ನೇಯ್ದು ಬೇಸಿಗೆಯ ಆಚರಣೆಯಲ್ಲಿ ಬಳಸುತ್ತಿದ್ದರು.



ಚಿತ್ರ ಕೃಪೆ: ಉಮಾಪತಿ ಭಟ್ಟ ಕೆ ವಿ

ಸೇಂಟ್ ಜಾನ್ಸ್ ಈವ್ ನಲ್ಲಿ ದುಷ್ಟಶಕ್ತಿಗಳಿಂದ ರಕ್ಷಿಸಲು ಎಳೆಯ ಚಿಗುರನ್ನು ಧರಿಸಲಾಗುತ್ತಿತ್ತು ಮತ್ತು ಪ್ರಯಾಣಿಕರನ್ನು ಬಳಲಿಕೆ ಹಾಗೂ ಶಾಖದ ತೊಂದರೆಯಿಂದ ರಕ್ಷಿಸುತ್ತದೆ ಎಂಬ ನಂಬಿಕೆಯಿತ್ತು. ನೇಪಾಳದಲ್ಲಿ ಈ ಸಸ್ಯವನ್ನು ದೇವರುಗಳ ನೈವೇದ್ಯವಾಗಿ, ಪರಿಸರವನ್ನು ಶುದ್ಧಿಕರಿಸಲು ದೂಪದ್ರವ್ಯವಾಗಿ ಬಳಸಲಾಗುತ್ತದೆ. ಚೀನಾ ಹಾಗೂ ಜಪಾನಿನಲ್ಲಿ ದುಷ್ಟ ಶಕ್ತಿಗಳನ್ನು ದೂರವಿಡಲು ಮನೆಯಬಾಗಿಲಿಗೆ ಸಸ್ಯವನ್ನು ನೇತುಹಾಕುವ ಪದ್ದತಿ ಪ್ರಾಚೀನದಲ್ಲಿತ್ತು.

ಆರ್ಟೆಮಿಸ್ ದೇವತೆಯ ಹೆಸರಿನಿಂದ ಕರೆಯಲ್ಪಡುವ ಮಂಚಿಕುಡಿ ಸಸ್ಯವು ಚಂದ್ರ ಚಕ್ರಗಳು. ಫಲವತ್ತತೆ, ಭವಿಷ್ಯ ಜ್ಞಾನ, ರಕ್ಷಣೆಯ ಪ್ರಾಚೀನ ಗ್ರೀಕ್ ತಿಳುವಳಿಕೆಗೆ ಅವಿಭಾಜ್ಯ ಅಂಗವಾಗಿತ್ತು. ರೋಮನ್ನರು ಈ ಸಸ್ಯವನ್ನು ಪೂಜಿಸುತ್ತಿದ್ದರು.

ಸೈನಿಕರು ಮತ್ತು ಪ್ರಯಾಣಿಕರು ಸುರಕ್ಷತೆಗಾಗಿ ಮತ್ತು ಆಯಾಸವನ್ನು ನಿವಾರಿಸಲು ತಮ್ಮ ಬೂಟುಗಳಲ್ಲಿ ಮಾಚಿ ಪತ್ರೆಯನ್ನು ಇಡುತ್ತಿದ್ದರು. ನೇಪಾಳದಲ್ಲಿ ಕೀಟನಾಶಕವಾಗಿ ಎಲೆಗಳ ಗೊಬ್ಬರವಾಗಿ ಬಳಸಲಾಗುತ್ತದೆ. ದೇಹದ ಮೇಲೆ ಮಂಚಿಕುಡಿ ರಸವನ್ನು ಹಚ್ಚಿದರೆ ಸೊಳ್ಳೆ ನಿವಾರಣೆಯಾಗಿ ಕಾರ್ಯ ಮಾಡುತ್ತದೆ. ಭೂತಬಾಧೆ, ಬಾಲಗ್ರಹ ನಿವಾರಣೆಗೆ ಉಪಯೋಗವಿದೆ.

ಕಾಂಡವು ಮೃದುವಾಗಿದ್ದು, ಬೇರಿನಿಂದ ಚಿಗುರಿ ಸುತ್ತಲೂ ಹರಡಿಕೊಂಡು ಎರಡರಿಂದ ಮೂರುಅಡಿ ಎತ್ತರವಾಗಿ. ತೇವಾಂಶ ಇರುವ ಕಡೆಗಳಲ್ಲಿ ಹುಲುಸಾಗಿ ಬೆಳೆಯುತ್ತದೆ. ಸೇವಂತಿಗೆ ಗಿಡದ ಎಲೆಯಂತೆ ಕಾಣುವದು. ಸಸಿಗಳನ್ನು ಸುಲಭವಾಗಿ ಬೆಳೆಸಬಹುದು. ಸಾಂಸ್ಕೃತಿಕ ಉಪಯೋಗದಷ್ಟೇ ಔಷಧಿಯವಾಗಿ ಬಳಕೆಯಿದೆ. ಒಂದು ವರ್ಷದ ಶಿಶುಗಳಿಗೆ ಮಲಬದ್ದತೆಯಾದರೆ ದಿನಕ್ಕೊಂದು ಸಾರೆ ಹತ್ತು ಮಂಚಿಪತ್ರೆಯ ಎಲೆಯನ್ನು ನೀರಿನಲ್ಲಿ ನಯವಾಗಿ ಅರೆದು ಸೋಸಿ ಅರ್ಧ ಚಮಚ ಕುಡಿಸಿದರೆ ನಿವಾರಣೆಯಾಗುತ್ತದೆ. ಹೊಟ್ಟೆಯುಬ್ಬರ, ಹೊಟ್ಟೆಯೊಳಗಿನ ಕ್ರಿಮಿರೋಗಕ್ಕೆ ಉತ್ತಮ ಔಷಧ. ಕರುಳುವ್ಯಾಧಿ, ಚರ್ಮರೋಗ, ಮೂಲವ್ಯಾಧಿ, ಉದರಶೂಲೆಗಳಿಗೆ ಮಂಚಿಕುಡಿಯಿಂದ ಮದ್ದು ತಯಾರಿಸುವರು. ಶೀತ ತಲೆನೋವುಗಳಲ್ಲಿ ಎಲೆಗಳನ್ನು ನೀರಿನಲ್ಲಿ ಅರೆದು ಬಿಸಿ ಮಾಡಿ ನೆತ್ತಿಗೆ ಹಾಗೂ ನೋವಿನ ಭಾಗಗಳಿಗೆ ಲೇಪನ ಒಂದುವರೆ ಗಂಟೆ ಬಿಟ್ಟು ಬಿಸಿ ನೀರಿನಲ್ಲಿ ತೊಳೆಯುವದು.

ಈ ಸಸ್ಯವು ಸಿನಿಯೋಲ್, ಥುಜೋನ್, ಥುಜಿಲ್ ಮತ್ತು ಸಿಟ್ರೆಲ್ ಎಂಬ ರಾಸಾಯನಿಕ ಘಟಕಗಳನ್ನು ಹೊಂದಿದೆ. ಎಲೆಗಳ ಪೇಸ್ಟ್ ಲೇಪನ ಮಾಡುವದರಿಂದ ಊತ ಗಾಯ ವಾಸಿಯಾಗುವದು.

ಮಲಬದ್ದತೆ, ಪಿತ್ತ, ಮೂತ್ರಕೋಶದ ದೋಷ, ಚರ್ಮರೋಗ ಮೊದಲಾದ ಕಾಯಿಲೆಗಳನ್ನು ಗುಣ ಪಡಿಸುವ ಶಕ್ತಿ ಹೊಂದಿದೆ. ಶ್ರೀ ಗೋಪಾಲ ತೈಲ ಮಾಚಿತ್ರೆಯುಕ್ತ ಆಯುರ್ವೇದ ಔಷಧವಾಗಿದೆ.

ಮಂಚಿ ಪತ್ರ ಗಿಡವು ಕೇವಲ ನಮ್ಮ ತೋಟದ ಮೂಲೆಯಲ್ಲಿರುವ ಒಂದು ಸಾಮಾನ್ಯ ಸೊಪ್ಪಲ್ಲ. ಬದಲಿಗೆ ಆರೋಗ್ಯ ಮತ್ತು ಪೌಷ್ಟಿಕಾಂಶಗಳ ನಿಧಿಯಾಗಿದೆ. ಈ ಪುಟ್ಟ ಎಲೆಗಳಲ್ಲಿ ಅಡಗಿರುವ ಪ್ರಬಲವಾದ ಔಷಧಿಯ ಗುಣಗಳು ಮತ್ತು ಪ್ರತಿಕಾಯಗಳ ಶಕ್ತಿಯು ನಮ್ಮ ಪೂರ್ವಜರು ನಿಸರ್ಗದ ಬಗ್ಗೆ ಹೊಂದಿದ್ದ ಆಳವಾದ ಅರಿವಿಗೆ ಸಾಕ್ಷಿ. ಆಧುನಿಕ ಜಗತ್ತಿನಲ್ಲಿ ನಾವು ಸಂಕೀರ್ಣ ಆರೋಗ್ಯ ಸಮಸ್ಯೆಗಳಿಗೆ ರಾಸಾಯನಿಕ ಔಷಧಿಗಳನ್ನು ಆಶ್ರಯಿಸುವ ಬದಲು ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿಯೇ ಲಭ್ಯವಿರುವ ಇಂತಹ ಅದ್ಭುತ ಸಂಪನ್ಮೂಲಗಳನ್ನು ಗುರುತಿಸಬೇಕು.ಆರೊಗ್ಯಕರ ಜೀವನದ ರಹಸ್ಯವು ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿಲ್ಲ ಬದಲಿಗೆ ನಮ್ಮ ಸ್ಥಳೀಯ ಗಿಡಮೂಲಿಕೆಗಳಲ್ಲಿದೆ. ಈ ಅಮೂಲ್ಯ ಸಸ್ಯವನ್ನು ನಮ್ಮ ದಿನನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ನಾವು ಕೇವಲ ದೇಹವನ್ನು ಪೋಷಿಸುತ್ತಿಲ್ಲ ಪ್ರತಿಯಾಗಿ ಸಾವಿರಾರು ವರ್ಷಗಳ ನಮ್ಮ ಸಾಂಪ್ರದಾಯಿಕ ವೈದ್ಯಕೀಯ ಜ್ಞಾನವನ್ನು ಗೌರವಿಸುತ್ತಿದ್ದೇವೆ ಆರೋಗ್ಯಕರ ನಾಳೆಗಾಗಿ ಮನೆಯ ಅಂಗಳಲದಲಿ ಇಂದೇ ಮಾಚಿಪತ್ರೆ ಗಿಡವನ್ನು ಆರೋಪಣ ಮಾಡೋಣ. ನಮ್ಮ ನಾಡಿನ ವನಮೂಲಿಕೆ ಮಹತ್ವವನ್ನು ಜಗತ್ತಿಗೆ ಪರಿಚಯಿಸೋಣ.

**ಉಮಾಪತಿ ಭಟ್ಟ ಕೆ ವಿ**
ಅಧ್ಯಕ್ಷರು ಮತ್ತು ಪರಿಸರ ಕಾರ್ಯಕರ್ತರು
ಸಮಗ್ರ ವಿಕಾಸ ಟ್ರಸ್ಟ್, ಶಿರಸಿ